ಶ್ರೀ. ಜೀವರಾಜ ಆಳ್ವ— ಸಣ್ಣ ಪತ್ರಿಕೆಗಳ ಬಗ್ಗೆ ಒಂದು ವರದಿಯನ್ನು ಕೊಡಲು ಮಾನ್ಯ ಎಂ. ಬಿ. ಸಿಂಗ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ. ಆ ಸಮಿತಿ ಇನ್ನೂ ಪೂರ್ಣ ವರದಿಯನ್ನು ಕೊಟ್ಟಿಲ್ಲ. ಇಂಟರೀಮ್ ರಿಕಮೆಂಡೇಷನ್ ಎಂದು ಎರಡು ಸಲಹೆಗಳನ್ನು ಕೊಟ್ಟಿದ್ದಾರೆ. ಒಂದು ಜಾಹಿರಾತು ಕೊಡುವುದು. ಮತ್ತೊಂದು ಕಾಲಂ ಸೆಂಟಿಮಿಟರ್‌ಗೆ ೫ ರೂಪಾಯಿ ಕೊಡುವುದು ಆದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರಿ ಆರ್. ವೆಂಕಟರಾಮಯ್ಯ— ಶ್ರೀ ಎಂ. ಬಿ. ಸಿಂಗ್‌ರವರ ಕಮಿಟಿ ರಿಪೋರ್ಟ್‌ನ್ನು ಯಾವಾಗ ಕೊಟ್ಟಿದೆ? ಇನ್ನೊಂದು ಮೂರು ತಿಂಗಳುಗಳಲ್ಲಿ ಸಣ್ಣ ಪತ್ರಿಕೆಗಳವರಿಗೆ ಪ್ರೋತ್ಸಾಹ ಕೊಡುತ್ತೀರಾ? ಇನ್ನೊಂದು ೧೫ ದಿವಸಗಳಲ್ಲಿ ನೀವು ಪ್ರೋತ್ಸಾಹ ಕೊಟ್ಟರೆ ಸಣ್ಣ ಪತ್ರಿಕೆಗಳು ಉಳಿದುಕೊಳ್ಳುತ್ತವೆ ಇಲ್ಲದಿದ್ದರೆ ಅವರುಗಳೆಲ್ಲಾ ಪತ್ರಿಕಾ ಕಛೇರಿಯ ಬಾಗಿಲು ಮುಚ್ಚಿಕೊಂಡು ಹೋಗುತ್ತಾರೆ.

ಶ್ರೀ ಜೀವರಾಜ ಆಳ್ವ.—ಎಂ ಬಿ. ಸಿಂಗ್‌ರವರ ಕಮಿಟಿ ಇನ್ನೂ ರಿಪೋರ್ಟ್ ಕೊಟ್ಟಿಲ್ಲ. ಮಧ್ಯದಲ್ಲಿ ಒಂದೆರಡು ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನೊಂದೆರಡು ತಿಂಗಳುಗಳಲ್ಲಿ ಸಮಿತಿಯ ಪೂರ್ಣ ವರದಿ ನಮಗೆ ಬರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಸಣ್ಣ ಪತ್ರಿಕೆಗಳವರಿಗೆ ನ್ಯೂಸ್‌ಪ್ರಿಂಟ್ ಕೊಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಅದನ್ನು ನೋಡುತ್ತೇನೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆಯನ್ನು ಮಾನ್ಯ ಬಸವಲಿಂಗಪ್ಪನವರು ಕೇಳಿ

ಶ್ರೀ ಬಿ. ಬಸವಲಿಂಗಪ್ಪ.—ನಾನು ನನ್ನ ಪ್ರಶ್ನೆಯನ್ನು ಕೇಳುತ್ತೇನೆ. ಆದರೆ ಸಂಬಂಧಪಟ್ಟ ಗೃಹಮಂತ್ರಿಗಳು ಇಲ್ಲದೇ ಇರುವುದರಿಂದ, ಮೊದಲಿನ ಪ್ರಶ್ನೆಯಲ್ಲಿ ಒಂದು ಸಣ್ಣ ಉಪ ಪ್ರಶ್ನೆಯನ್ನು ಕೇಳುತ್ತೇನೆ. ಈಗ ಮಾನ್ಯ ಮಂತ್ರಿಗಳು ಸಣ್ಣ ಪತ್ರಿಕೆಗಳವರಿಗೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದಾರೆ. ದೀನದಲಿತರು ಸಣ್ಣ ಪತ್ರಿಕೆ ನಡೆಸುತ್ತಿದ್ದು ಅವರಿಗೆ ಜಾಹೀರಾತು ಕೊಡಬೇಕಾದರೆ ಇಷ್ಟು ವರ್ಷ ಆವರು ಪತ್ರಿಕೆ ನಡೆಸಬೇಕೆನ್ನುವ ಕಂಡೀಷನ್ ಹಾಕುತ್ತೀರಿ. ದೀನದಲಿತರು ನಡೆಸತಕ್ಕ ಪತ್ರಿಕೆಗಳು, ಸಣ್ಣ ಪತ್ರಿಕೆಗಳು ನಡೆಯುತ್ತಿವೆ. ನಿಮ್ಮ ಕಂಡೀಷನ್‌ಗಳನ್ನು ಸಡಿಲ ಮಾಡಿ ಅವರಿಗೆ ಜಾಹೀರಾತು ಕೊಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಪತ್ರಿಕೆಗಳು ರೆಗ್ಯುಲಾರಿಟಿ ಇರಬೇಕು. ಸರ್ಕ್ಯುಲೇಷನ್ ಇಷ್ಟೇ ಇರಬೇಕೆಂದು ಕಂಡೀಷನ್ ಹಾಕುತ್ತಿಲ್ಲ. ಶೇಕಡ ೭೦ರಷ್ಟು ರೆಗ್ಯುಲಾರಿಟಿ ಇಟ್ಟು ಕೊಂಡಿರತಕ್ಕವರಿಗೆ ಪೇಟ್ಟಿನ ಪ್ರೋತ್ಸಾಹ ಕೊಡುತ್ತಿದ್ದೇವೆ. ಕೆಲವರು ಪತ್ರಿಕೆಗಳನ್ನು ಹೆಸರಿಗೆ ಮಾತ್ರ ನಡೆಸುತ್ತಿದ್ದಾರೆ. ಅಂತಹವರಿಗೆ ಜಾಹೀರಾತುಗಳನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸಂಗಾತಿ ವಾರಪತ್ರಿಕೆ ಇದೆ ಅದಕ್ಕೆ ಜಾಹೀರಾತು ಕೊಡತ್ತೀರಾ ?

ಡಾ॥ ಜೀವರಾಜ ಆಳ್ವ.—ನಮ್ಮ ಕಂಡೀಷನ್ ಪ್ರಕಾರ ಪತ್ರಿಕೆ ಒಂದು ವರ್ಷ ನಡೆಯುಬೇಕು. ಈ ವಿಷಯದಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ವೈದ್ಯಕೀಯ ಶಿಕ್ಷಣಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸೇರ್ಪಡೆ.

೫೦೨. ಶ್ರೀ ಬಸವರಾಜ್ (ಬ್ರಹ್ಮಾವರ್).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೬೫ರ ಸಾಲಿನಲ್ಲಿ ಎಂ.ಬಿ.ಬಿ.ಎಸ್. ಸೀಟಿಗೆ ಮೊದಲ ಅಂಕಗಳ ಆಧಾರದ ಮೇಲೆ ಆಯ್ಕೆಯಾದ ಹಲವಾರು ವಿದ್ಯಾರ್ಥಿಗಳು ಕೊನೆಯ ಹಂತದಲ್ಲಿ ಅಂದರೆ ಆಕ್ಟೋಬರ್ ನಂತರ ಕಾಲೇಜುಗಳಿಗೆ ಸೇರ್ಪಡೆಯಾಗಬೇಕಾದ ಪರಿಸ್ಥಿತಿ ಉಂಟಾದುದು ನಿಜವೇ ?

ಆ) ಹಾಗಿದ್ದಲ್ಲಿ ಅವಕ್ಕೆ ಕಾರಣವೇನು ಮತ್ತು ಅದಕ್ಕೆ ಜವಾಬ್ದಾರರಾದವರ ಮೇಲೆ ಏನು ಕಾರ್ಯಕ್ರಮ ಕೈಗೊಳ್ಳಲಾಗಿದೆ?

ಇ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪ್ರಥಮ ಸೆಮಿಸ್ಟರಿನಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವಲ್ಲಿ ಪರವಾನಗಿ ನೀಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಾಗಿದ್ದಲ್ಲಿ ವಿದ್ಯಾರ್ಥಿಗಾಗುವ ಒಂದು ಸೆಮಿಸ್ಟರಿನ ನಷ್ಟಕ್ಕೆ ಸರಕಾರವು ಯಾವ ಪರಿಹಾರ ನೀಡಬಲ್ಲದು ?

ಡಾ॥ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿ, ಕುಟುಂಬ ಕಲ್ಯಾಣ ಸಚಿವರು).—

ಅ) ೧೯೮೫-೮೬ರ ಸಾಲಿನಲ್ಲಿ ಮೊದಲ ಹಂತದಲ್ಲಿ ಆಯ್ಕೆಯಾದ ಯಾವ ವಿದ್ಯಾರ್ಥಿಗೂ ಅಕ್ಟೋಬರ್ ನಂತರ ಕೊನೆಯ ಹಂತದಲ್ಲಿ ಕಾಲೇಜಿಗೆ ಸೇರ್ಪಡೆಯಾಗಬೇಕಾದ ಪರಿಸ್ಥಿತಿ ಉಂಟಾಗಿಲ್ಲ. ಮೊದಲ ಹಂತದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಸೆಪ್ಟೆಂಬರ್ ೨೪ರ ಮುನ್ನವೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದರು. ಎರಡು ಮತ್ತು ಮೂರನೇ ಹಂತದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಕ್ರಮವಾಗಿ ೭-೧೦-೧೯೮೫ ಮತ್ತು ೨೪-೧೦-೧೯೮೫ರ ಮುನ್ನ ಕಾಲೇಜಿಗೆ ಪ್ರವೇಶ ಪಡೆದಿದ್ದರು.

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದ ಪ್ರಯುಕ್ತ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೈಸೂರು ಅಥವಾ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾನಿಲಯದಲ್ಲಿನ ವೈದ್ಯಕೀಯ ಕಾಲೇಜಿಗೆ ಅಕ್ಟೋಬರ್ ೩೦, ೧೯೮೫ರ ಮುನ್ನ ಪ್ರವೇಶಪಡೆದ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಪರವಾನಗಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಅಕ್ಟೋಬರ್ ೩೦, ೧೯೮೫ರ ಮುನ್ನ ಪ್ರವೇಶ ಪಡೆದ ಯಾವುದೇ ವಿದ್ಯಾರ್ಥಿಗೆ ಒಂದು ಸೆಮಿಸ್ಟರಿನ ನಷ್ಟವಾಗುವ ಸಂಭವವಿಲ್ಲ. ಆದ್ದರಿಂದ ಯಾವುದೇ ಪರಿಹಾರ ನೀಡುವ ಪ್ರಶ್ನೆಯೇ ಇಲ್ಲ.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ೨೪-೧೦-೮೫ರ ಮುನ್ನವೇ ಆಯ್ಕೆಯಾದ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆದಿದ್ದಾರೆಂದು ಉತ್ತರದಲ್ಲಿ ತಿಳಿಸಿರುತ್ತಾರೆ. ಆದರೆ, ಪ್ರಥಮ ೨೦೦ ಜನ ವಿದ್ಯಾರ್ಥಿಗಳು ಅಕ್ಟೋಬರ್ ಒಳಗೆ ಕಾಲೇಜಿಗೆ ಸೇರುವುದಕ್ಕೆ ಆಗಿಲ್ಲ. ಇದರಿಂದ ಒಂದು ಸೆಮಿಸ್ಟರ್ ನಷ್ಟವಾಗುವುದಿಲ್ಲವೇ ?

ಡಾ॥ ಹೆಚ್.ಎಲ್. ತಿಮ್ಮೇಗೌಡ.-ಆ ರೀತಿ ಟೈಂ ಸಾಕಾಗಲಿಲ್ಲವೆಂದು ಯಾರೂ ಮನವಿ ಮಾಡಿಲ್ಲ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂಥ ಪ್ರಶ್ನೆ ಕೂಡ ಬರುವುದಿಲ್ಲ.

ಶ್ರೀ ಬಸವರಾಜ್.—ನಾನು ವಿವರ ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೀರಾ ?

ಡಾ॥ ಹೆಚ್.ಎಲ್. ತಿಮ್ಮೇಗೌಡ.—ಮಾಹಿತಿ ಇದ್ದರೆ ಕಳುಹಿಸಿಕೊಡಿ.

ಶಿವಮೊಗ್ಗ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿನ ವೈದ್ಯಕೀಯ ಅಧಿಕಾರಿಗಳು

೨೬. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳೆಷ್ಟು,

ಆ) ಪ್ರತಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕಗಳ ವೈದ್ಯಾಧಿಕಾರಿಗಳೆಷ್ಟು,

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಕೊಂಡ ಕ್ರಮವೇನು,

ಈ) ಶಿಕಾರಿಪುರ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಈ ಹಿಂದಿನ ವಿಧಾನಸಭಾ ಅಧಿವೇಶನದಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ಕೆ.ಪಿ.ಎಸ್.ಸಿ.ಯಿಂದ ನೇಮಿಸಿಕೊಂಡ ತಕ್ಷಣ ಭರ್ತಿ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದು ನಿಜವೇ ?